ತಕ್ಕಂಥಾದ್ದು ಇದೆ. ಅದು ವಿನಾಯಿತ್ತದೆ ಎಂದರೆ, ನಮ್ಮ ಮನೆಯಲ್ಲಿ ನಮಗೆ ಬಹಳ ಪ್ರೀತಿಯಿಂದಿರತಕ್ಕವರು ಪತ್ರದೇನೇ ನಮಗೆ ಜ್ಞಾಪಕ ಬರುವುದು ಬಾಕಿ ಸಂದರ್ಭದಲ್ಲಿ ಅದು ನಮಗೆ ಜ್ಞಾಪಕ ಬರುವುದಿಲ್ಲ ಅದಕ್ಕೆ ಸ್ವಲ್ಪ ತಾವೆಲ್ಲರ ಸಹಕಾರವನ್ನು ಕೊಡಬೇಕು ಎಂದು ಹೇಳಿ, ನಮ್ಮ ರಾಜ್ಯದಲ್ಲಿ ಅಪಘಾತಗಳ ಸಂಖ್ಯೆಯನ್ನು ಕಡಿಮೆ ಮಾಡಲಿಕ್ಕೆ ಆದಷ್ಟು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇನೆ ಎಂದು ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಭರವಸೆಯನ್ನು ಕೊಡುತ್ತೇನೆ.

ಶ್ರೀ ಪಂಪಾಪತಿ.—ನೂರಕ್ಕೆ ನೂರರಷ್ಟು ಸಂಪೂರ್ಣವಾಗಿ ನಮ್ಮ ಸಹಕಾರ ಅವರಿಗೆ ಇದೆ ಎಂದು ನಾನು ಅವರಿಗೆ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

(೩) ಕಾರವಾರ ಜಿಲ್ಲೆ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಭತ್ತದ ಬೆತ್ತನೆ ಬೀಜಗಳು ರೈತರಿಗೆ ದೊರಕದ ಬರುವ ವರ್ಷ ಸಹ ಉತ್ತರ ಕನ್ನಡ ಜಿಲ್ಲೆಯಲ್ಲಿ ಹತ್ತಿ ಹಾಗೂ ಭತ್ತದ ಉತ್ಪನ್ನ ಕಡಿಮೆಯಾಗಿ ರೈತರಿಗೆ ದುಸ್ಥಿತಿಯುಂಟಾಗುವ ಕುರಿತು.

ಶ್ರೀ ಆರ್. ಎಸ್. ನಾಯಕ್.—ಮಾನ್ಯ ಅಧ್ಯಕ್ಷರೆ. ಬೀಜಗಳ ಕೊರತೆ ಬಗ್ಗೆ ಮಾನ್ಯ ಕೃಷಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ಹೇಳಿಕೆಯನ್ನು ಮಾಡುತ್ತೇನೆ.

೧. ಡಿ. ಸಿ. ಹೆಚ್. ೩೨ (ಜಯಲಕ್ಷ್ಮಿ) ಹತ್ತಿ ಬೀಜ

೧೯೮೭-೮೮ನೇ ಸಾಲಿನಲ್ಲಿ ಅತೀ ಉದ್ದ ಎಳೆಯ ಹತ್ತಿಯಾದ ಡಿ ಸಿ. ಹೆಚ್. ೩೨ ಹತ್ತಿಗೆ ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಇದ್ದುದರಿಂದ ೧೯೮೮-೮೯ನೇ ಸಾಲಿನಲ್ಲಿ ಅಧಿಕ ಸಂಖ್ಯೆಯಲ್ಲಿ ರೈತರು ಈ ಬೆಳೆಯನ್ನು ತೆಗೆದುಕೊಳ್ಳಲು ಮುಂದೆ ಬಂದಿರುತ್ತಾರೆ. ಈ ಕಾರಣದಿಂದ ನಿರೀಕ್ಷಿಸಿದ ಬೇಡಿಕೆಗಿಂತ ಹೆಚ್ಚಿನ ಬೇಡಿಕೆ ಈ ತಳಿಯ ಹತ್ತಿ ಬೀಜಕ್ಕೆ ಈ ಸದರಿ ಸಾಲಿನಲ್ಲಿರುತ್ತದೆ.

ಈ ಹಿಂದಿನ ಸಾಲಿನಲ್ಲಿದ್ದ ಬೇಡಿಕೆ ಮತ್ತು ಪೂರಾಟವಾದ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡು ೧೯೮೮-೮೯ನೇ ಸಾಲಿನಲ್ಲಿ ಸರಬರಾಜು ಮಾಡಲು ಕರ್ನಾಟಕ ರಾಜ್ಯ ಬೀಜ ನಿಗಮವು ಒಟ್ಟು ೨,೨೬೦ ಕ್ವಿಂಟಾಲ್‌ನಷ್ಟು ಪ್ರಮಾಣೀಕೃತ ಸಂಕರ ಹತ್ತಿ ಬೀಜವನ್ನು ೧೯೮೭-೮೮ರಲ್ಲಿ ಉತ್ಪಾದಿಸುವ ಗುರಿ ಹೊಂದಿತ್ತು. ಆದರೆ ಹವಾಮಾನದ ವೈಪರೀತ್ಯದಿಂದಾಗಿ ಮತ್ತು ಬಿ ಜೋತ್ಪಾದಕರು ಪೂರ್ಣ ಪ್ರಮಾಣದ ಉತ್ಪಾದನೆಯನ್ನು ಬೀಜ ನಿಗಮಕ್ಕೆ ಒಪ್ಪಿಸಿಲ್ಲವಾದ್ದರಿಂದ ೧,೬೪೮ ಕ್ವಿಂಟಾಲ್‌ನಷ್ಟು ಪ್ರಮಾಣೀಕೃತ ಬೀಜ ಮಾತ್ರ ಲಭ್ಯವಾಗಿರುತ್ತದೆ. ೧೯೮೮-೮೯ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಗೆ ಕರ್ನಾಟಕ ರಾಜ್ಯ ಬೀಜ ನಿಗಮವು ೨೨.೫೦ ಕ್ವಿಂಟಾಲ್‌ನಷ್ಟು ಡಿ.ಸಿ.ಹೆಚ್. ೩೨ ಹತ್ತಿ ಬೀಜವನ್ನು ಹಸುಗೆ ಮಾಡಿರುತ್ತದೆ.

ರಾಜ್ಯದಲ್ಲಿ ಹತ್ತಿ ಬೀಜದ ಉತ್ಪಾದನೆಯ ಕೊರತೆ ಇದ್ದ ಮೂಲಕ ಪ್ರಮಾಣೀಕೃತ ಹತ್ತಿ ಬೀಜವನ್ನು ನೆರೆ ರಾಜ್ಯದ ಬೀಜ ನಿಗಮಗಳಿಂದ ತರುವ ವ್ಯವಸ್ಥೆ ಮಾಡಲಾಗಿದೆ, ಮತ್ತು ಖಾಸಗಿ ಸಂಸ್ಥೆಗಳಿಗೂ ಸಹ ಪ್ರಮಾಣೀಕೃತ ಬೀಜ ತರಲು ಅನುಮತಿ ಕೊಡಲಾಗಿದೆ.

ರಾಜ್ಯದಲ್ಲಿ ೧೯೮೪-೮೫ನೇ ಸಾಲಿನಲ್ಲಿ ೧೦ ಲಕ್ಷ ಹೆಕ್ಟೇರ್ ಹತ್ತಿ ಬೆಳೆಯುವ ಪ್ರದೇಶದಲ್ಲಿ ಗಮನಾರ್ಹವಾದ ಬದಲಾವಣೆಯಾಗಿ ೧೯೮೭-೮೮ನೇ ಸಾಲಿಗೆ ಕೇವಲ ೪ ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಇಳಿದಿತ್ತು. ಇದರ ಹಿನ್ನೆಲೆಯಲ್ಲಿ ಹೆಚ್ಚುವರಿ ಬೇಡಿಕೆಯನ್ನು ನಿರೀಕ್ಷಿತವಾಗಿ ಅಂದಾಜು ಮಾಡುವುದು ಸಾಧ್ಯವಾಗಿಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಿಂದಿನ ಸಾಲಿನಲ್ಲಿ ಹತ್ತಿ ಉತ್ಪಾದನೆ ಗಣನೀಯವಾಗಿದ್ದಿಲ್ಲ. ಆದರೆ ವಾಣಿಜ್ಯ ಹತ್ತಿಗೆ ಲಭಿಸುತ್ತಿರುವ ಬೆಲೆಗಳು ಉತ್ತೇಜಕವಾಗಿರುವುದರಿಂದ ರೈತರು ಈ ಜಿಲ್ಲೆಯ ಕೆಲವೊಂದು ತಾಲ್ಲೂಕುಗಳಲ್ಲಿ ಭತ್ತಕ್ಕೆ ಬದಲಾಗಿ ಹತ್ತಿ ಬೆಳೆಯಲಿಂ ಪ್ರಾರಂಭಿಸಿದ್ದಾರೆ.

೨. ಭತ್ತದ ಬಿತ್ತನೆ ಬೀಜ

ಉತ್ತರ ಕನ್ನಡ ಜಿಲ್ಲೆಗೆ ಕರ್ನಾಟಕ ರಾಜ್ಯ ಬೀಜ ನಿಗಮವು ೧೯೮೮-೮೯ ಸಾಲಿಗೆ ೬೨೫ ಕ್ವಿಂಟಾಲ್‌ಗಳ ಭತ್ತದ ಬಿತ್ತನೆ ಬೀಜದ ಪೂರೈಕೆಯ ಗುರಿ ಹೊಂದಿದ್ದು, ಇದೀಗಲೇ ೭೫೯ ಕ್ವಿಂಟಾಲ್‌ಗಳಷ್ಟು ಬೀಜವನ್ನು ಸರಬರಾಜು ಮಾಡಲಾಗುತ್ತಿದೆ. ಹೀಗಾಗಿ ಗುರಿಗಿಂತ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಭತ್ತದ ಭತ್ತನೆ ಬೀಜವನ್ನು ರೈತರಿಗೆ ಒದಗಿಸುವ ವ್ಯವಸ್ಥೆ ಮಾಡಲಾಗಿದೆ. ಇದಲ್ಲದೆ ರಾಷ್ಟ್ರೀಯ ಬೀಜ ನಿಗಮದಿಂದ ೨೦೦ ಕ್ವಿಂಟಾಲ್‌ಗಳಷ್ಟು ಭತ್ತದ ಬಿತ್ತನೆ ಬೀಜ ಸರಬರಾಜು ಮಾಡಲಾಗುತ್ತಿದೆ.

ಬೀಜೋತ್ಪಾದನೆಯನ್ನು ಕೈಗೊಳ್ಳಲು ಕನಿಷ್ಠ ೨ ವರ್ಷ ಮುಂಚಿತವಾಗಿ ಮೂಲ ಬೀಜಗಳ ಬೇಡಿಕೆಯನ್ನು ಕೃಷಿ ವಿಶ್ವವಿದ್ಯಾನಿಲಯಕ್ಕೆ ತಿಳಿಸಬೇಕಾಗುತ್ತದೆ. ಆದುದರಿಂದ ದಿಢೀರ್ ಬೇಡಿಕೆಗಳನ್ನು ಪೂರೈಸುವುದು ಕಷ್ಟಕರವಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ತಮಗೂ ಸಾಕಷ್ಟು ಗೊತ್ತಿದೆ. ತಮ್ಮ ಮಂಬಾಂತರ ಸರ್ಕಾರದವರೂ ಗೊತ್ತು ಮಾಡಿಕೊಳ್ಳಬೇಕು. ಹತ್ತಿ ಬೀಜದ ಬಗ್ಗೆ ಶ್ರೀಮಾನ್ ಲಕ್ಷ್ಮೀ ಸಾಗರ್‌ರವರು ಉತ್ತರ ಕೊಟ್ಟಿದ್ದಾರೆ. ಪ್ರಾಯಶಃ ಆವರು ಬೆಂಗಳೂರಿನಲ್ಲಿರುವಂತಹವರು, ಇತರೆ ಕಾರ್ಪೋರೇಷನ್‌ಗಳ ಬಗ್ಗೆ ಅವರು ಉತ್ತರ ಹೇಳಿದ್ದರೆ ನಾವು ಸ್ವಾಗತ ಮಾಡಬಹುದಾಗಿತ್ತು. ಇವತ್ತು ಏನಾಗಿದೆ ಎಂದರೆ ಕಾಟನ್ ಡೆವಲಪ್‌ಮೆಂಟ್ ಸ್ಕೀಮನ್ನೇ ಸರ್ಕಾರದವರು ಅಬಾಲಿಷ್ ಮಾಡಿದ್ದಾರೆ. ಈ ಅಧಿಕಾರಿಗಳೆಲ್ಲಾ ಸೇರಿಕೊಂಡು ಕಾಟನ್ ಚಿತ್ರ ಇವರ ನಕ್ಷೆಯಲ್ಲೇ ಇರಬಾರದು ಏನು ಪ ರೀತಿಯಲ್ಲಿ ಮಾಡಿದ್ದಾರೆ. ಒಂದೇ ವರ್ಷದಲ್ಲಿ ಬೀಜಗಳನ್ನು ಉತ್ಪಾದನೆ ಮಾಡುವುದಕ್ಕಾಗುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಮಾನ್ಯ ನಾಯಕ್‌ರವರು ಹೋದ ವರ್ಷ ಎಷ್ಟು ಬೀಜಗಳನ್ನು ರೈತರಿಗೆ ಬೆಳೆಯಲು ಸಲುವಾಗಿ ಕೊಟ್ಟಿದ್ದೀರಿ ಎಂದು ಕೇಳಿದ್ದಕ್ಕೆ ಇವರಿಂದ ಉತ್ತರವೇ ಇಲ್ಲ. ಅದನ್ನು ರೈತರು ಬೆಳೆದರೆ ಬೆಳೆಯಲಿ, ಇಲ್ಲದಿದ್ದರೆ ಬೇಡ. ಅಂದರೆ ಇದರ ಬಗ್ಗೆ ನಿಮ್ಮ ಯೋಜನೆಯಾದರೂ ಇರಬೇಕಲ್ಲ. ಅದೂ ಇಲ್ಲದೆ ನಮ್ಮಲ್ಲಿ ಬೀಜ ಇಲ್ಲವೆಂದು ಹೇಳಿದರೆ ಹೇಗೆ ? ಹೋದ ವರ್ಷ ಎಷ್ಟು ಎಕರೆಯಲ್ಲಿ ಹತ್ತಿಯನ್ನು ಬೆಳೆಯಲಾಗಿತ್ತು ? ಎಷ್ಟು ಬೀಜವನ್ನು ಶೇಖರಣೆ ಮಾಡಿದ್ದೀರಿ ಎಂಬುದನ್ನಾದರೂ ತಾವು ಹೇಳಬೇಕು. ಗುಜರಾತಿನಲ್ಲೂ ಬೀಜದ ಅಭಾವ ಇದೆ ಮಹಾರಾಷ್ಟ್ರದಲ್ಲೂ ಬೀಜದ ಅಭಾವ ಇದೆ, ಆಲ್ಲಿ ಏನೋ ತೊಂದರೆ ಇದೆ. ಇಲ್ಲಿ ಏನೋ ತೊಂದರೆ ಇದೆ ಎಂದು ಹೇಳುವಂಥ ಸರ್ಕಾರದವರು ಗುಜರಾತಿನಲ್ಲಿ ಎಷ್ಟು ವರೈಟಿಯ ಹತ್ತಿಯನ್ನು ಬೆಳೆದಿದ್ದಾರೆ ? ಎಷ್ಟು ವರೈಟಿ ಹತ್ತಿ ಬೀಜವನ್ನು ಮಾರುಕಟ್ಟೆಗೆ ರಿಲೀಸ್ ಮಾಡಿದ್ದಾರೆ? ಎಂದು ಹೇಳಬೇಕು. ಮಹಾರಾಷ್ಟ್ರದಲ್ಲಿ ೨೦-೨೫ ತರಗತಿಯ ವರೈಟೀಸ್ ಹತ್ತಿ ಬೀಜವನ್ನು ಮಾರುಕಟ್ಟೆಗೆ ರಿಲೀಸ್ ಮಾಡಿದ್ದಾರೆ. ಆದರ ಬಗ್ಗೆ ಅವರು ರೀಸರ್ಚ್ ಮಾಡುತ್ತಿದ್ದಾರೆ. ನಮ್ಮಲ್ಲಿ ೨ ಕೃಷಿ ವಿಶ್ವವಿದ್ಯಾನಿಲಯಗಳು ಇವೆ. ಅವು ಏನಾದರೂ ಮಲಗಿವೆಯೋ ಅಥವಾ ಎದ್ದಿವೆಯೋ ? ಹಿಂದೊಮ್ಮೆ ಶ್ರೀಮಾನ್ ಆರಕೇರಿಯವರಾಗಲಿ, ಹಾಗೂ ಶ್ರೀಮಾನ್ ಕಾತಕೆಯವರು ಕೊಟ್ಟಂಥ ಡಿ.ಸಿ.ಎಚ್.-೩೨ ಹತ್ತಿ ಬೀಜವನ್ನು ಇವತ್ತಿಗೂ ಅದನ್ನೇ ಹೇಳಿಕೊಳ್ಳುತ್ತಾ ಕುಳಿತುಕೊಂಡರೆ, ಹೇಗೆ ? ಬೀಜ ಮಾಡಿದ್ದೀರೋ ಅಥವಾ ಇಲ್ಲವೋ ಅದನ್ನಾದರೂ ಹೇಳಬೇಕು. ಬೀಜವನ್ನು ಕೊಡುವುದಕ್ಕೆ ಏನು ಮಾಡಿದ್ದೀರಿ ? ಎಲ್ಲಾ ರೈತರನ್ನೂ ಹೈಬ್ರಿಡ್ ಮೈಂಡ್ ಮಾಡಿದ್ದೀರಿ ಅಂತಹ ರೈತರಿಗೆ ಸರಿಯಾದ ಸಮಯಕ್ಕೆ ಬೀಜಗಳನ್ನೇ ಕೊಡದಿದ್ದರೆ ಏನು ಮಾಡಬೇಕು ? ಕರ್ನಾಟಕ ಹತ್ತಿಗೆ ಉತ್ತಮವಾದ ಪ್ರದೇಶ, ಉತ್ತಮವಾದ ಭೂಮಿ ಎಂದು ಹೆಸರಾಗಿತಕ್ಕ ನಾಡು, ಅಂತಹದ್ದರಲ್ಲಿ ನೀವು ಬೀಜವನ್ನು ಕೊಡುತ್ತಿಲ್ಲ. ಈ ರೀತಿ ಕೊರತೆಯಾಗಿರುವುದಕ್ಕೆ ಕಾರಣವೇನು ? ಈ ಕೊರತೆಯನ್ನು ನಿವಾರಣೆ ಮಾಡುವುದಕ್ಕೆ ಏನು ಯೋಜನೆ ಹಾಕಿದ್ದೀರಿ ? ಇಲ್ಲಿ ಯೋಜನಾ ಮಂತ್ರಿಗಳು ಇಲ್ಲ. ಅಗ್ರಿಕಲ್ಚರ್ ಮಿನಿಸ್ಟರ್ ಯಾವುದೋ ಕೆಲಸದ ನಿಮಿತ್ತ ಹೋಗಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳೂ ಸದನದಲ್ಲಿ ಇಲ್ಲ. ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಇದಕ್ಕೆ ಉತ್ತರ ಹೇಳುತ್ತಿದ್ದಾರೆ. ನಿಮ್ಮ ಯೋಜನೆಯಲ್ಲಿ ಸಂಶೋಧನೆಯು ಸಲುವಾಗಿ ಹಣವನ್ನು ತೆಗೆದು ಇಟ್ಟಿದ್ದೀರೋ ಅಥವಾ ಇಲ್ಲವೋ ? ಸಂಶೋಧನಾ ಕೆಲಸ ನಡೆದಿದೆಯೋ ಅಥವಾ ಇಲ್ಲವೋ ಹೇಗೆ ? ಇಲ್ಲದಿದ್ದರೆ ಯಾವ ರೀತಿ ಜನರಿಗೆ ಬೀಜವನ್ನು ಒದಗಿಸುತ್ತೀರಿ ? ಈ ವರ್ಷ ಇಲ್ಲದಿದ್ದರೂ ಮುಂದಿನ ವರ್ಷವಾದರೂ ಹೇಗೆ ಮಾಡುತ್ತೀರಿ ಎಂಬುದನ್ನು ಹೇಳಬೇಕು. ರೈತ ತಾನೇ ಮುಂದೆ ಬಂದು ಬೀಜ

ವನ್ನು ಪಡೆದುಕೊಳ್ಳುತ್ತಾನೆ ಎಂಬುದಾಗಿ ಹೇಳಿದ್ದಾರೆ. ರೈತನಿಗೆ ಇಷ್ಟೊಂದು ಪರಿಜ್ಞಾನ ಇದ್ದರೆ ಅಷ್ಟೊಂದು ಪರಿಜ್ಞಾನ ಇದೆಯೇ ? The ryot is not capable of protecting his own interest. ಸರ್ಕಾರ ಇವತ್ತು ರೈತನ ಗಾರ್ಡಿಯನ್ನಾಗಿ ಕೆಲಸ ಮಾಡಬೇಕು. ರೈತರಿಗೆ ಇಷ್ಟು ಎಕರೆಯಲ್ಲಿ ಇಂತಹ ಬೆಳೆಯನ್ನು ಬೆಳೆಯಿರಿ ಎಂಬುದಾಗಿ ಹೇಳಬೇಕು. ಧಾರಣೆ ಹೀಗೆ ಬರುತ್ತದೆ ಎಂಬುದನ್ನೂ ಕೂಡ ಹೇಳಬೇಕು. ಹತ್ತಿಗೆ ಆತ್ಯಂತ ಒಳ್ಳೆಯ ರೇಟು ಇರುವಾಗ ಅವನಿಗೆ ಬೀಜ ಕೊಡುವುದಿಲ್ಲವೆಂದರೆ ಏನು ಮಾಡಬೇಕು ಆ ರೈತ ? ಇದರಿಂದ ಸರ್ಕಾರ ತನ್ನ ಮುಖ್ಯ ಕರ್ತವ್ಯದಲ್ಲಿ ಲೋಪ ಮಾಡಿದಂತಾಗುತ್ತದೆ. ಕಾಟನ್ ಡೆವಲಪ್‌ಮೆಂಟ್ ಸ್ಕೀಂ ಅನ್ನೇ ಅಬಾಲಿಷ್ ಮಾಡಿದ್ದಾರೆ. ಇದರ ಬಗ್ಗೆ ಅಗ್ರಿಕಲ್ಚರ್ ಮಿನಿಸ್ಟರ್, ಪ್ಲಾನಿಂಗ್ ಮಿನಿಸ್ಟರ್ ಹಾಗೂ ಮುಖ್ಯ ಮಂತ್ರಿಗಳಂ ಹಾಗೂ ಹಣಕಾಸಿನ ಸಚಿವರು ಕೂಡಿಯೇ ಈ ಕೆಲಸವನ್ನು ಮಾಡಬೇಕು. ಆಧಿಕಾರಿಗಳ ಮೇಲೆ ಜವಾಬ್ದಾರಿಯನ್ನು ಹಾಕಿ ಕೊಡುವುದಲ್ಲ. ಶ್ರೀಮಾನ್ ದೇಶಪಾಂಡೆಯವರು ನಿಜವಾಗಿಯೂ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅವರು ಪ್ರಾಮಾಣಿಕವಾಗಿ ಹತ್ತಿ ಬೀಜವನ್ನು ರೈತರಿಗೆ ಒದಗಿಸಂ ವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದ ಸಂಬಂಧಪಟ್ಟ ಮಂತ್ರಿಗಳನ್ನು ಭೇಟಿಯಾಗಿ ಸಮಸ್ಯೆಯ ಬಗ್ಗೆ ಹೇಳಿದ್ದಾರೆ. ಇಷ್ಟೆಲ್ಲಾ ತೊಂದರೆ ಪಟ್ಟು ಎಲ್ಲರಿಗೂ ಭಿಕ್ಷೆ ಬೇಡಿ, ಬೀಜವನ್ನು ಕೊಡುವುದಾದರೆ, ನೀವು ಏನು ಮಾಡುವವರು ? ಈ ಮಾತನ್ನು ಆತ್ಯಂತ ವಿಷಾದದಿಂದ ಹೇಳ ಬೇಕಾಗುತ್ತದೆ. ರೈತರು ರಾಜ್ಯದ ಬೆನ್ನೆಲುಬು. ಅವನ್ನು ಮುರಿದರೆ ಅವರ ಪಾಪ ನಿಮಗೆ ಹತ್ತುತ್ತದೆ ಎನ್ನುವ ಮಾತನ್ನು ಹೇಳಂತ್ತೇನೆ.

ಭತ್ತದ ಬೀಜದ ಬಗ್ಗೆ ಜಪಾನೀಸ್ ಫಾರಂ ಎಂಬುದಾಗಿ ಪುಂಡ್ಯದ ಹತ್ತಿಗೆ ಪ್ರಾರಂಭ ಮಾಡಲಾ ಗಿತ್ತು. ಅದು ಕೆಲಸ ಮಾಡುತ್ತಿದೆಯೋ ಅಥವಾ ಇಲ್ಲವೋ ಎಂಬುದನ್ನು ಗೊತ್ತಿಲ್ಲ. ಆ ಕೆಲಸ ಪ್ರಾರಂಭ ಮಾಡಿದ್ದರೆ ಬೀಜವನ್ನು ಕೊಡುವಂತಹ ಕೆಲಸವನ್ನು ಏಕೆ ಪ್ರಾರಂಭ ಮಾಡಿಲ್ಲ ? ಬೀಜದ ಕೊರತೆ ಏಕೆ ಇರಬೇಕು? ಸಣ್ಣ ಸಣ್ಣ ಟೊಮ್ಯಾಟೊ ಸಹಿತ ಹೈಬ್ರಿಡ್ ಬೀಜಗಳನ್ನು ಮಾಡಿ ಖಾಸಗೀ ಯವರು ೧೨೦೦ ರೂಪಾಯಿಗಳಿಗೆ ಒಂದು ಕೇಜಿಯಂತೆ ಮಾರಾಟ ಮಾಡುತ್ತಿದ್ದಾರೆ. ಹಾಗಿದ್ದ ಮೇಲೆ ಸರ್ಕಾರದವರು ಏನು ಮಾಡುತ್ತಿದ್ದಾರೆ ?

೧೧-೦೦ ಎ. ಎಂ.

ನಿಮ್ಮ ಆರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಏನು ಮಾಡುತ್ತಿದೆ ? ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನ್ನು ನೀವು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದ್ದೀರಿ. ಅದನ್ನು ನೀವು ಪೊಲಿಟಿಕಲ್ ಮಾಡುವುದಕ್ಕೆ ಹೋಗಿ ನಿರ್ಲಕ್ಷ ಮಾಡಿದಿರೋ ಅಥವಾ ಅಧಿಕಾರಿಗಳಿಗೆ ಹೊಸದಾಗಿ ಪ್ರಮೋಷನ್ ಕೊಡುವ ಬರದಲ್ಲಿ ಅಗ್ರಿಕಲ್ಚರ್ ಮೂಲೆ ಗುಂಪಾಗಿದೆಯೋ ನನಗೆ ಗೊತ್ತಿಲ್ಲ. ನಿಜವಾಗಿಯೂ ಈವತ್ತು ಬೀಜದ ವ್ಯವಸ್ಥೆಯನ್ನು ಮಾಡದಿದ್ದರೆ ನಿಮ್ಮನ್ನು ಸದಾಕಾಲ ನಿಮ್ಮನ್ನು ದೂಷಿಸುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ ಇದಕ್ಕೆ ಸೂಕ್ತವಾದ ಸಲಹೆಗಳನ್ನೂ ಕೊಡಿ, ಕೊಡದಿದ್ದರೆ ಅಂಕಿ ಅಂಶಗಳನ್ನ ಕಲೆಕ್ಟ್ ಮಾಡಿ ಇನ್ನೊಮ್ಮೆ ಸೆಲ್ಫ್ ಅಫ್ ಮಾಡಿ ಎದು ಪ್ರೆಸಿಡೆಂಟ್‌ಪರಿಗೆ ಏನಂತಿ ಮಾಡಿ ಕೊಳ್ಳುತ್ತೇವೆ. ಅವರು ಹೆಲ್ಪ್ ಆಫ್ ಮಾಡಿದ ನಂತರ ಮತ್ತೊಮ್ಮೆ ಅಂಕಿ ಸಂಖ್ಯೆಗಳನ್ನು ಕೊಟ್ಟರೆ ಸೂಕ್ತವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯಲ್ಲಿ ಹತ್ತಿಯನ್ನು ಕಳೆದ ೨ ವರ್ಷಗಳಿಂದ ಬೆಳೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ ಹಳಿಯಾಳ, ಮುಂಡಗೋಡು, ಎಲ್ಲಾಪುರ. ಶಿರಸಿ ತಾಲ್ಲೂಕುಗಳಲ್ಲಿ ಘಟ್ಟದಮೇಲೆ ತಾಲ್ಲೂಕುಗಳಲ್ಲಿ ಬೆಳೆಯುತ್ತಿದ್ದಾರೆ ಆದರೆ ಬೀಜ ಪೂರೈಸಲು ಬೇಕಾಗುತ್ತದೆ. ಈಗ ಬೇರೆ ಬೇರೆ ಜಿಲ್ಲೆಗಳಲ್ಲಿ ಮೊದಲು ಬೆಳೆಯುತ್ತಿದ್ದವರಿಗೆ ಸ್ವಲ್ಪ ಮಟ್ಟಿಗೆ ಬೀಜ ಪೂರೈಸಲಾಗದಿದ್ದರೂ ಅವರಷ್ಟಕ್ಕೆ ಅವರೇ ಸಂಗ್ರಹ ಮಾಡಿಕೊಂಡು ಇಟ್ಟು ಕೊಂಡಿರ ಬಹುದು. ನಮ್ಮ ಜಿಲ್ಲೆಗೆ ಬೀಜ ಪೂರೈಸದಿದ್ದರೆ ರೈತರು ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಮಳೆ ಕಡಿಮೆ ಬೀಳುತ್ತಂಥ ಪ್ರದೇಶಗಳಲ್ಲಿ ಹತ್ತಿ ಬೆಳೆಯುವುದನ್ನು ಅಳವಡಿಸಿಕೊಂಡು ಬೆಳೆಯುತ್ತಿದ್ದಾರೆ. ಉತ್ತಮವಾಗಿ ಬೆಳೆ ಬರುತ್ತಿದೆ. ಆದರೆ ಬೀಜದ ಕೊರತೆ ಇದೆ. ಇಲ್ಲಿ ಏನಾಗಿದೆ ಎಂದರೆ ಸುಮಾರಾಗಿ ಅವರ ಲೆಕ್ಕದ ಪ್ರಕಾರ ೨೫೦ ರಿಂದ ೩೦೦ ಕ್ವಿಂಟಾಲ್ ಹತ್ತಿ ಬೀಜದ ಬೇಡಿಕೆ ಉತ್ತರ ಕನ್ನಡ ಜಿಲ್ಲೆಯಲ್ಲಿ

ಇದೆ. ಆದರೆ ಅವರ ಹತ್ತಿರ ಸಂಗ್ರಹವಿರುವುದು ಅಥವಾ ಇವರು ಕೊಡುವುದಕ್ಕೆ ಇಷ್ಟಪಟ್ಟರೂ ಕೇವಲ ೧೧೫ ಕ್ವಿಂಟಾಲ್ ಇರುತ್ತದೆ. ಸುಮಾರಾಗಿ ೧೩೫ ರಿಂದ ೧೫೦ ಕ್ವಿಂಟಾಲ್‌ವರೆಗೆ ಹತ್ತಿಬೀಜದ ಅವಶ್ಯಕತೆ ಉತ್ತರ ಕನ್ನಡ ಜಿಲ್ಲೆಗೆ ಇದೆ. ಇದನ್ನು ದೊರೆಕಿಸುವುದಕ್ಕೆ ತಾವು ಏನು ಪ್ರಯತ್ನ ಮಾಡುತ್ತೀರಿ ಎನ್ನುವುದನ್ನು ಹೇಳಬೇಕು ? ನಮ್ಮ ರಾಷ್ಟ್ರೀಯ ಬೀಜದ ಉತ್ಪಾದನಾ ನಿಗಮ ಎಂದು ಇದೆ. ಆದರಿಂದ ಎಷ್ಟು ಬೀಜವನ್ನು ನಮ್ಮ ರಾಜ್ಯಕ್ಕೆ ತರಿಸಿಕೊಂಡಿದ್ದೀರಿ? ಮತ್ತೆ ಉತ್ತರ ಕನ್ನಡ ಜಿಲ್ಲೆಗೆ ಎಷ್ಟು ಬೀಜ ಕೊಟ್ಟಿದ್ದೀರಿ ಎನ್ನುವುದನ್ನೆಲ್ಲವನ್ನು ಹೇಳಬೇಕು. ನಂತರ ಮೊನ್ನೆ ಮಾನ್ಯ ದೇಶಪಾಂಡೆಯವರು ಹೇಳಿದರು, ನಾವು ಹೆಚ್ಚು ಹತ್ತಿಯನ್ನು ಉತ್ಪಾದನೆ

ಮಾಡುವುದಕ್ಕೆ ೩-೪ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಕೊಟ್ಟಿದೆ, ಅದನ್ನು ಉತ್ತರ ಕನ್ನಡ ಜಿಲ್ಲೆಗೆ ಕೊಡಲು ಕೆಲವು ತಾಲ್ಲೂಕುಗಳನ್ನು ಆಳವಡಿಸುತ್ತೇವೆಂದು ಹೇಳಿದರು. ತಾವು ಈ ರೀತಿ ಒಂದು ಎಕರೆಯಲ್ಲಿ ೪೦ ಕ್ವಿಂಟಾಲ್‌ಗೂ ಹೆಚ್ಚಿನ ರೀತಿಯಲ್ಲಿ ಬತ್ತವನ್ನು ಬೆಳೆಯುವುದಕ್ಕೆ ಪ್ರಯತ್ನ ಮಾಡುವ ಗುರಿಯನ್ನು ಇಟ್ಟುಕೊಂಡಿದ್ದೀರಿ, ಸರ್ಕಾರದವರು ಬೀಜವನ್ನು ಸರಿಯಾಗಿ ಪೂರೈಸದಿದ್ದರೆ ನೀವು ೪೦ ಕ್ವಿಂಟಾಲ್ ಬೆಳೆಯುವುದಕ್ಕೆ ಯಾವ ಜಾತಿ ಬೀಜವನ್ನು ಕೊಡುತ್ತೀರಿ? ನೀವು ಎಷ್ಟು ಬೀಜವನ್ನು ಸಂಗ್ರಹ ಮಾಡಿದ್ದಿರಿ. ಯಾವ ಯಾವ ರೈತರಿಗೆ ಕೊಡಲು ಅಲ್ಲಿ ಗುರುತಿಸಿದ್ದಿರಿ? ಅಲ್ಲಿ ಮಾನ್‌ಸೂನ್ ಪ್ರಾರಂಭವಾಗಿ ನೆರೆ ಹಾವಳಿ ಇರುತ್ತದೆ. ಪರಿಸ್ಥಿತಿ ಹೀಗಿರಬೇಕಾದರೆ ಅಲ್ಲಿಗೆ ಯಾವ ಪರದಿಯ ಬೀಜದ ಅವಶ್ಯಕತೆ ಇದೆ ಎನ್ನುವುದನ್ನು ತಿಳಿಯುವುದೆ ಹೇಗೆ? ಅಥವಾ ಕೇಂದ್ರ ಸರ್ಕಾರದಿಂದ ಬಂದ ೩-೪ ಕೋಟಿ ರೂಪಾಯಿಗಳನ್ನು ತಾವು ಈ ರೀತಿ ಖರ್ಚು ಮಾಡಿದ್ದೇವೆ ಎನ್ನುವ ಬಗ್ಗೆ ಅಂಕಿಸಂಖ್ಯೆಗಳನ್ನು ಮುಂದಿನ ವರ್ಷ ಕೊಟ್ಟುಬಿಡುತ್ತೀರಾ ಎನ್ನುವುದನ್ನು ತಿಳಿಸಬೇಕು. ತಾವು ಬೇಳಿದಪಾಗೆ ೪೨೫ ಕ್ವಿಂಟಾಲ್ ಭತ್ತದ ಬೀಜ ಸಿಗುತ್ತದೆ ಆದರೆ ೭೫೯ ಕ್ವಿಂಟಾಲ್ ನಾವು ಇಟ್ಟುಕೊಂಡಿದ್ದೇವೆಂದು ಹೇಳಿದರೆ ಇದು ತಪ್ಪಾಗುತ್ತದೆ. ಜೂನ್ ೭ನೇ ತಾರೀಖಿಗೆ ಮಾನ್‌ಸೂನ್ ಕಮಾನ್ಸ್ ಆಗಬೇಕಾಗಿತ್ತು. ಆದರೆ ಈ ವರ್ಷ ಒಂದನೇ ತಾರೀಖಿನಿಂದಲೇ ಪ್ರಾರಂಭವಾಗಿದೆ. ೮-೯ ದಿವಸ ಮುಂಚಿತವಾಗಿಯೇ ಮಾನ್‌ಸೂನ್ ಪ್ರಾರಂಭವಾಗಿರುವಾಗ ನೀವು ಬೀಜಗಳನ್ನು ಸಹ ೧೫ ದಿವಸಗಳಿಗೆ ಮುಂಚಿತವಾಗಿಯೇ ಸಂಗ್ರಹ ಮಾಡಿಟ್ಟುಕೊಳ್ಳಬೇಕಾಗಿತ್ತು. ಹೊನ್ನಾವರ ತಾಲ್ಲೂಕಿನಲ್ಲಿ ನಾನು ನೋಡಿದೆ ನೀವು ರೈತರಿಗೆ ಬೀಜ ಕೊಡುವುದೇ ಒಂದು, ಅವರು ಕೇಳುವುದೇ ಒಂದು. ನೀವು ಸರಿಯಾದ ಬೀಜಗಳನ್ನು ಸಂಗ್ರಹ ಮಾಡಿಟ್ಟುಕೊಳ್ಳದಿರುವುದರಿಂದ ಅವರಿಗೆ ತೊಂದರೆಯಾಗಿದೆ. ನೀವು ಏನು ಸಂಗ್ರಹ ಮಾಡಿದ್ದೀರಿ? ಮಾನ್ಯ ಕೆ. ಎಚ್. ಪಾಟೀಲರವರು ಹೇಳಿದರು ಒಳ್ಳೆಯ ಕೆಲಸ ಮಾಡುತ್ತಾದ್ದಾರೆಂದು. ಅವರು ಏನು ಒಳ್ಳೆಯ ಕೆಲಸ ಮಾಡುತ್ತಿದ್ದಾರೆಂದು ನಾವು ಕೇಳಬೇಕಾಗಿದೆ.

ಅಧ್ಯಕ್ಷರು.—ನಿಮಗೆ ಏನು ಕೆಲಸವಾಗಬೇಕಾಗಿದೆ ಅದನ್ನು ಹೇಳಿಬಿಡಿ ?

ಶ್ರೀ ಆರ್. ಎನ್. ನಾಯಕ್.—ಕೃಷಿ ಮಂತ್ರಿಗಳಾಗಿ ಅವರು ಕೃಷಿಗೆ ಸಂಬಂಧಪಟ್ಟಹಾಗೆ ಕೃಷಿ ವಿಜ್ಞಾನವನ್ನು ಮೊದಲು ಅರ್ಥಮಾಡಿಕೊಳ್ಳಬೇಕು. ಸರಿಯಾದ ವೇಳೆಗೆ ಬೀಜಗಳನ್ನು ಸಂಗ್ರಹ ಮಾಡುವ ಒಂದು ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಆದರೆ ಅವರು ಇದರಲ್ಲಿ ವಿಫಲರಾಗಿದ್ದಾರೆ.

ಅಧ್ಯಕ್ಷರು.—ಈಗ ನಿಮಗೆ ಹತ್ತಿಬೀಜ ಎಷ್ಟು ಬೇಕು? ಭತ್ತದ ಬೀಜ ಎಷ್ಟುಬೇಕು ಅದನ್ನು ಹೇಳಿ ?

ಶ್ರೀ ಆರ್. ಎನ್. ನಾಯಕ್.—ಅದೇ ಹೇಳುತ್ತೇನೆ. ರಾಜಕೀಯ ದುರ್ಬೀಜಗಳನ್ನು ಬೇಕಾದಷ್ಟು ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾನ್ಯ ದೇಶಪಾಂಡೆಯವರು ಬೆಳೆಸಿದ್ದಾರೆ ಹಾಗೂ ಸಂಗ್ರಹಮಾಡಿ ಇಟ್ಟುಕೊಂಡಿದ್ದಾರೆ. ಇದನ್ನು ಬಿತ್ತಿದ ಕೂಡಲೇ ಎಲ್ಲಾ ಕಡೆ ಹುಟ್ಟುತ್ತದೆ. ಇವರು ರೈತರಿಗೆ ಬೇಕಾದಂಥ ಹತ್ತಿಬೀಜವನ್ನು ಸಂಗ್ರಹ ಮಾಡಿ ಇಟ್ಟುಕೊಂಡಿಲ್ಲವೆಂದು ಇಲ್ಲಿ ಕಾಣುತ್ತದೆ. ಆದ್ದರಿಂದ ಒಂದು ಸೂಚನೆಯನ್ನು ನಾನು ಇಲ್ಲಿ ಕೊಡಬೇಕಾಗಿದೆ ಏನೆಂದರೆ ಈ ರಾಜಕೀಯ ದುರ್ಬೀಜಗಳನ್ನು ಸುಟ್ಟುಹಾಕಿ ಭತ್ತದ ಮತ್ತು ಹತ್ತಿಯ ಬೀಜಗಳನ್ನು ಕೊಡುವುದಕ್ಕೆ ಏನಾದರೂ ಪ್ರಯತ್ನ ಮಾಡಿ. ಅವರು ಇದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು.

(ಮುಂದಿದೆ)

ಅಧ್ಯಕ್ಷರು.—ಮಾನ್ಯ ನಾಯಕ್‌ರವರೆ ಸುಮ್ಮನೆ ಅಡ್ಡಾದಿಡ್ಡಿಯಾಗಿ ಮಾತನಾಡುತ್ತಿದ್ದಿರಿ ಅವರ ವಿಚಾರ ಬಿಟ್ಟುಬಿಡಿ.

ಶ್ರೀ ಆರ್. ಎನ್. ನಾಯಕ್.—ನಮಗೆ ಹತ್ತಿಬೀಜ ಕೂಡಲೇ ಪೂರೈಸಬೇಕು. ಈಗ ಮಳೆ ಬರುತ್ತಿದೆ. ಉತ್ತರ ಕನ್ನಡ ಜಿಲ್ಲೆಗೆ ಮುಂಖ್ಯವಾಗಿ ಬಿತ್ತನೆ ಬೀಜಗಳನ್ನು ಕೂಡಲೇ ಪೂರೈಸಬೇಕು ? ಎರಡನೆಯದಾಗಿ ನಮ್ಮಲ್ಲಿ ಏನು ಸಂಗ್ರಹವಿದೆ ಮತ್ತು ನೀವು ಯಾರು ಯಾರು ರೈತರನ್ನು ಗುರುತಿಸಿದ್ದೀರಿ ಅದನ್ನೆಲ್ಲಾ ಕೇಳಿದ್ದಕ್ಕೆ ಉತ್ತರವನ್ನು ಕೊಡಬೇಕು.

ಶ್ರೀ ವಂಟ್ಲಾರಿಗೌಡ ಎಸ್ ಪಾಟೀಲ್ (ಸಂಕೇಶ್ವರ್).—ಸನ್ಮಾನ್ಯ ಅಧ್ಯಕ್ಷರೇ ನಾವು ಕೇಳಿದಂಥ ಗಮನಸೆಳೆಯುವಂಥ ಸೂಚನೆಗೆ ಸರ್ಕಾರದಿಂದ ಸರಿಯಾದ ಉತ್ತರ ಬಂದಿಲ್ಲ. ಒಕ್ಕಲುತನದಲ್ಲಿರತಕ್ಕಂಥ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎಂದರೆ ಅವರ ಅಂಕಿಅಂಶಗಳೇ ಬೇರೆ. ಜನರಿಗೆ ಬೇಕಾದಂಥ ಬೀಜದ ಅಂಶಗಳೇ ಬೇರೆ ಅವರು ಲೆಕ್ಕ ಹಾಕಿರುವುದು ೨೦೦ ಕ್ವಿಂಟಾಲ್. ಜನರಿಗೆ ಬೇಕಾಗಿರುವುದು ೨,೦೦೦ ಕ್ವಿಂಟಾಲ್ ಅದಕ್ಕೆ ತಾತ್ಪರಿಕವಾಗಿ ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ ಎಷ್ಟು ಬೀಜವನ್ನು ಉತ್ಪಾದನೆ ಮಾಡಬೇಕಾಗಿತ್ತೋ ಅಷ್ಟು ಬೀಜವನ್ನು ಉತ್ಪಾದನೆ ಮಾಡಲಿಕ್ಕೆ ಇವರಿಂದ ಆಗಲಿಲ್ಲ. ಯೂನಿವರ್ಸಿಟಿಯಲ್ಲಿ ಬೀಜ ಉತ್ಪಾದನೆ ಮಾಡತಕ್ಕಂಥ ಕ್ರಮ ಎಷ್ಟಿದೆ ? ಅದಕ್ಕೆ ಪೂರ್ತಿಯಾಗಿ ಹಣವನ್ನು ಒದಗಿಸಲು ಸರ್ಕಾರಕ್ಕೆ ಸಾಧ್ಯವೇ ಎನ್ನುವುದನ್ನು ಕೇಳಿದಾಗ ನಮಗೆ ಹಣದ ಕೊರತೆ ಇರುವುದರಿಂದ ನಾವು ಯಾವ ಕೆಲಸವನ್ನು ಮಾಡಲಿಕ್ಕೂ ಸಾಧ್ಯವಾಗುತ್ತಿಲ್ಲವೆಂದು ಅವರು ಹೇಳಿದರು. ಈ ದೃಷ್ಟಿಯಿಂದ ಹತ್ತಿಬೀಜದ ಬಗ್ಗೆ ಹೇಳಬೇಕಾದರೆ ಮಳೆ ಬಾರದಿರುವ ಕಡೆ ಹತ್ತಿಯನ್ನು ಬೆಳೆಯುತ್ತಿರಲಿಲ್ಲ. ಆದರೆ ಈಗ ಆಂಧ್ರಪ್ರದೇಶಗಳಲ್ಲೂ ಹತ್ತಿಯನ್ನು ಬೆಳೆಯತಕ್ಕಂಥ ಕ್ರಮ ನಡೆದಿದೆ. ಈ ವರ್ಷ ಮುಂಗಾರಿಂ ಮಳೆ ಬಂದಿರುವುದರಿಂದ ಅಲ್ಲಿ ಹತ್ತಿ ಬೀಜ ಉತ್ಪಾದನೆ ಹೇಗೆ ಆಗುತ್ತದೆ ಎನ್ನುವ ಪ್ರಶ್ನೆಯೂ ಕೂಡ ಉದ್ಭವವಾಗತಕ್ಕಂಥ ಸಂದರ್ಭವಿದೆ. ಹೆಚ್ಚು ಮಳೆ ಎಂದಾಗ ಹೊಡತ ಬಂದಿರುವುದನ್ನು ಅವರೂ ಕೂಡ ನೋಡಿರಬೇಕು. ಆದರ ಬಗ್ಗೆ ಎಚ್ಚರಿಕೆ ವಹಿಸಬೇಕು. ಸರ್ಕಾರದವರು ಬೀಜವನ್ನು ಕೊಡುವ ಕಾಲಕ್ಕೆ ಒಳ್ಳೆಯ ಬೀಜವನ್ನು ಕೊಡಬೇಕು, ಕೆಲವೊಂದು ಸಂದರ್ಭದಲ್ಲಿ ಬೀಜ ಒಳ್ಳೆಯ ಪ್ರಮಾಣಪತ್ರವನ್ನು ಹೊಂದಿರುತ್ತದೆ. ಆದರೆ ಬೀಜ ಹಾಕಿದ ಮೇಲೆ ಸಂಪೂರ್ಣವಾಗಿ ಬೆಳೆ ಹಾಳಾಗಿ ಹೋಗುತ್ತದೆ. ಈ ದೃಷ್ಟಿಯಿಂದ ಒಳ್ಳೆಯ ಬೀಜವನ್ನು ಪೂರೈಸುವ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಬೇಕು. ಇದು ಅಲ್ಲದೆ ಉತ್ತರ ಕನ್ನಡ ಜಿಲ್ಲೆಗೆ ಕರ್ನಾಟಕ ರಾಜ್ಯ ನಿಗಮ ೧೯೬೮-೬೯ನೇ ಸಾಲಿಗೆ ೬೨೫ ಕ್ವಿಂಟಾಲ್ ಭತ್ತದ ಬೀಜದ ಗುರಿಯನ್ನು ಹೊಂದಲಾಗಿತ್ತು. ಆದರೆ ಈಗಾಗಲೇ ೯೫೯ ಕ್ವಿಂಟಾಲ್ ಬೀಜದ ಪೂರೈಕೆ ಮಾಡುತ್ತಿದ್ದೇವೆಂದು ಇವರು ನಿಗದಿ ಮಾಡಿರುವಂಥ ಗುರಿಬೇರೆ ಇಲ್ಲಿ ಪೂರೈಕೆ ಆದಂಥ ಗುರಿ ಬೇರೆ. ಆಮೇಲೆ ರಾಷ್ಟ್ರೀಯ ಬೀಜ ನಿಗಮದ ಮುಖಾಂತರ ಇನ್ನೂರು ಕ್ವಿಂಟಾಲ್ ಭತ್ತದ ಬೀಜವನ್ನು ಸರಬರಾಜು ಮಾಡತಕ್ಕಂಥ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆಂದು ಹೇಳಿದರು. ಇಲ್ಲೂ ಕೂಡ ಒಂದೊಕೊಕ್ಕಂದು ವ್ಯತ್ಯಾಸವಾಗುತ್ತದೆ. ಅಧಿಕಾರಿಗಳು ನೇರವಾಗಿ ಲೆಕ್ಕ ಹಾಕಿಕ್ಕುವುದಿಲ್ಲ ಯಾವುದೋ ಒಂದು ಲೆಕ್ಕಬೇಕು ಅವರು ಮಾಡುತ್ತಾರೆ. ಇವರು ಇಲ್ಲಿ ಕಂಳತು ಲೆಕ್ಕ ಕೊಡುತ್ತಾರೆ. ದಿನನಿತ್ಯ ಬೇಕಾಗಿರುವ ಅಂಕಿಅಂಶಗಳೇ ಬೇರೆ ಇವರ ಹತ್ತಿರ ಇರುವ ಅಂಕಿಅಂಶಗಳೇ ಬೇರೆ. ಇಲಾಖೆಯ ಅಧಿಕಾರಿಗಳು ಕೊಡುವ ಅಂಕಿಅಂಶಗಳಿಗೆ ಹೊಂದಾಣಿಕೆಯಾಗುವುದಿಲ್ಲ. ಮತ್ತೆ ಹತ್ತಿ ಎಲ್ಲಿ ವಿಶೇಷವಾಗಿ ಬೆಳೆಯುತ್ತದೆ ಅಲ್ಲಿಗೆ ಹತ್ತಿಬೀಜವನ್ನು ಪೂರೈಕೆ ಮಾಡುವುದಲ್ಲದೆ ಅವರಿಗೆ ಬೇಕಾದ ಔಷಧಿಗಳನ್ನು ಕೂಡಪೂರೈಕೆ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ತಮಗೆ ಗೊತ್ತಿರಬಹುದು ಆಂಧ್ರಪ್ರದೇಶದಲ್ಲಿ ಏನು ನಡೆಯುತ್ತಂದು. ಹತ್ತಿ ಬಿತ್ತಿದ್ದರು. ಬಿತ್ತಿದ ಹತ್ತಿ ಬರಲೇ ಇಲ್ಲ.

ಅಧ್ಯಕ್ಷರು.— ತಾವು ಭಾಷಣ ಮಾಡುವುದಕ್ಕೆ ಹೊರಟಿದ್ದೀರಿ ತಾವು ಕ್ಲಾರಿಫಿಕೇಷನ್ ಮಾತ್ರ ಕೇಳಿ.

ಶ್ರೀ ವಂಟ್ಲಾರಿಗೌಡ ಎಸ್. ಪಾಟೀಲ್.—ಮುಖ್ಯವಾದ ವಿಷಯಕ್ಕೆ ಬರುತ್ತೇನೆ. ಹತ್ತಿಬೀಜದ ಸಂಗ್ರಹಣೆ ಮತ್ತು ಪೂರೈಕೆಯ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಹಾಗೆಯೇ ಔಷಧಿಗಳನ್ನು ಪೂರೈಕೆ ಮಾಡಬೇಕೆಂದು ಮಾನ್ಯ ಸಚಿವರ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ದೇಶಪಾಂಡೆಯವರು ಪಟ್ಟಣಪ್ರದೇಶದ ದೇಶಪಾಂಡೆಯವರಾಗಬಾರದು. ಹಳ್ಳಿಗಾಡಿನ ದೇಶಪಾಂಡೆಯವರಾಗ ಬೇಕೆಂದು ಕಳಿದಬಾರಿ ಹೇಳಿದ್ದೆ.

ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ನೇರವಾಗಿ ಮಾನ್ಯ ಮಂತ್ರಿಗಳಾದ ಶ್ರೀ ದೇಶಪಾಂಡೆ ಅವರಿಗೆ ಆದೇಶ ನೀಡಬೇಕು, ಎಲ್ಲೆಲ್ಲಿ ಈ ತರಹ ತೊಂದರೆ ಇದೆ ಅಲ್ಲಿಗೆ ಹೋಗಿ ಒಂದೆರಡು ದಿವಸ ನಿಂತು ಆ ಜನರ ಪರಿಸ್ಥಿತಿ ಏನಿದೆ ತೊಂದರೆ ಏನಿದೆ ಎಂಬುದನ್ನು ಅಧ್ಯಯನ ಮಾಡಿ ಬೀಜ ಪೂರೈಕೆ ಮಾಡುವ ಕಾರ್ಯಕ್ರಮದಲ್ಲಿ ಅವರು ಪಾಲ್ಗೊಳ್ಳಬೇಕೆಂದು ಸರ್ಕಾರಕ್ಕೆ ಏನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ. ಸನ್ಮಾನ್ಯ ಕೆ.ಎಚ್. ಪಾಟೀಲರು ತುಂಬಾ ಆಗ್ರಹವಾಗಿ ಸರ್ಕಾರದ ವ್ಯವಸಾಯ ಇಲಾಖೆಯ ಅಧಿಕಾರಿಗಳೂ ಬೀಜ ಒದಗಿಸತಕ್ಕ ಸರ್ಕಾರದ ಕಾರ್ಯಕ್ರಮದ ಬಗ್ಗೆ ತೀವ್ರವಾದ ಆಕ್ಷೇಪಣೆಯನ್ನು ವ್ಯಕ್ತ ಮಾಡುತ್ತಾ ತುಂಬಾ ದುಃಖದಿಂದ ಹೇಳುತ್ತಿದ್ದೇನೆ ಎಂಬ ಮಾತನ್ನು ಕೂಡ ಹೇಳಿದ್ದಾರೆ. ಈ ಸರ್ಕಾರ ಪಾಪದ ಹೊರೆಯನ್ನು ಹೊತ್ತಿಕೊಂಡು ಇರಬೇಕಾಗುತ್ತದಲ್ಲ ಎಂದು ತಮ್ಮ ದುಃಖವನ್ನು ತೋರಿಸಿದ್ದಾರೆ. ನಾನು ಮಂತ್ರಿಗಳ ಪರವಾಗಿ ಉತ್ತರ ಕೊಡತಕ್ಕ ಸಮಯದಲ್ಲಿ ಹಿಂದೆ ಈ ಇಲಾಖೆಯ ಮಂತ್ರಿಗಳು ಎರಡು ಮೂರು ಸಾರಿ ಇದೇ ಪ್ರಶ್ನೆಯನ್ನು ಬೇರೆ ಮಾನ್ಯ ಸದಸ್ಯರು ಎತ್ತಿದಾಗ ಅವರು ಹೇಳಿದ ಉತ್ತರವನ್ನು ಗಮನವಿಟ್ಟು ಕೇಳಿದ್ದೇನೆ, ಅದೇ ಪ್ರಶ್ನೆಯನ್ನು ಮಾನ್ಯ ಸದಸ್ಯರಾದ ಆರ್.ಎನ್. ನಾಯಕ್ ಅವರು, ಮಲ್ಲಾರಿಗೌಡ ಪಾಟೀಲರು ಕೇಳಿದ್ದಾರೆ. ಕೇಳಬಾರದು ಎಂಬ ವಿಧಿ ನಿಯಮ ಏನೂ ಇಲ್ಲ.

ಶ್ರೀ ಕೆ.ಎಚ್. ಪಾಟೀಲ್.—ಶಕ್ತಿ ಮೀರಿ ತಂದುಕೊಡುತ್ತೇವೆ ಎಂದು ಮಂತ್ರಿಗಳು ಆಶ್ವಾಸನೆ ಕೊಟ್ಟರು. ಈ ದಿಸೆಯಲ್ಲಿ ತಮ್ಮಲ್ಲಿ ಪರ್ಮನೆಂಟ್ ಪ್ಲಾನಿಂಗ್ ಏನಿದೆ ಹೇಳಿ?

ಶ್ರೀ ಎ. ಲಕ್ಷ್ಮೀಸಾಗರ್.—ಹೇಳುತ್ತೇನೆ.ರೈತನಿಗೆ ಏನು ಬೇಕಾಗುತ್ತದೆ ಎಂಬುದನ್ನು ಸರ್ಕಾರದವರು ಗಮನವಿಟ್ಟು ಮಂಜಿಯೇ ಯೋಚನೆ ಮಾಡಿ ಅವನು ಕೇಳುವುದಕ್ಕೆ ಮೊದಲೇ ಅವನಿಗೆ ಅಗತ್ಯವಾದ ಸಲಕರಣೆಗಳನ್ನು ಒದಗಿಸತಕ್ಕ ಯೋಜನೆಯನ್ನು ಸರ್ಕಾರದವರು ಹಾಕಿಕೊಳ್ಳಬೇಕು ಅದು ಮಾಡದೇ ಹೋದರೆ ಸರ್ಕಾರ ಇದ್ದೂ ಏನು ಪ್ರಯೋಜನ ಎಂಬ ಮಾತನ್ನು ಹೇಳಿದ್ದಾರೆ. ನಾನುಅವರ ವಾದವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಆದರಲ್ಲಿ ಏನೂ ವ್ಯತ್ಯಾಸ ಮತ್ತು ಭಿನ್ನಾಭಿಪ್ರಾಯಗಳು ಇಲ್ಲ ರೈತರು ಈ ದೇಶದ ಬೆನ್ನೆಲುಬು ಎಂದು ಎಲ್ಲರೂ ಹೇಳುತ್ತಿದ್ದಾರೆ. ಹಾಡಿ ಹೊಗಳುತ್ತಿದ್ದಾರೆ, ಆದರೆ ಅವನಿಗೆ ಬಂದಂಥ ಕಷ್ಟದ ಸಮಯದಲ್ಲಿ ಸಹಾಯಕ್ಕೆ ಹೋಗುತ್ತಿಲ್ಲ ಎಂದು ಹೇಳಿದ್ದಾರೆ, ಅದು ದಿಟ. ಮಾನ್ಯ ಭೂಪತಿಯವರು ಇಲಾಖೆಯ ಬೇಡಿಕೆಯ ಮೇಲೆ ಮಾತನಾಡುತ್ತಾ ರೈತನನ್ನು ಎಲ್ಲರೂ ಬೆನ್ನೆಲುಬು ಎಂದು ಹೇಳುತ್ತೇವೆ, ಆದರೆ ಅವನಲ್ಲಿ ಉಳಿದಿರುವುದು ಎಲುಬು ಮಾತ್ರ ಎಂದು ಹೇಳಿದ್ದಾರೆ. ಆ ಮಾತು ಉತ್ಪ್ರೇಕ್ಷೆ ಏನಿಸಿದರೂ ಅದರಲ್ಲಿ ಸತ್ಯಾಂಶ ಇದೆ. ಆದರೆ ತೊಂದರೆ ಏನು ಎಂದರೆ ವಿಕಾಪಕಿ ಪ್ರತಿವರ್ಷ ಬೇಕಾಗತಕ್ಕ ಬೀಜವನ್ನು ಕೇಳಿದತಕ್ಷಣ ಉತ್ಪತ್ತಿ ಮಾಡತಕ್ಕ ಸಾಮರ್ಥ್ಯ ಯಾರಿಗೂ ಇಲ್ಲ. ನಾವು ಮುಂಗಡವಾಗಿ ಬೀಜವನ್ನು ಮುಂದಿನ ವರ್ಷ ಅದರ ನಂತರ ಕೊಡಬೇಕೆಂದು ವಿಶ್ವವಿದ್ಯಾನಿಲಯಗಳಿಗೆ ಬೇಡಿಕೆ ಸಲ್ಲಿಸಿದರೂ ಕೂಡ ನಮಗೆ ಅವರು ಒದಗಿಸಿ ಕೊಡತಕ್ಕ ಕಾಲ ಎರಡು ವರ್ಷಗಳು ಕನಿಷ್ಠಪಕ್ಷ ಆಗುತ್ತಿದೆ ಎಂದು ತಮ್ಮ ಉತ್ತರದಲ್ಲಿ ಕೃಷಿ ಮಂತ್ರಿಗಳು ಹೇಳಿದ್ದಾರೆ. ಬೇಡಿಕೆ ಯಾವಾಗ ಎಷ್ಟು ಬರುತ್ತದೆ ಎಂದು ಪೂರ್ವ ನಿಯೋಜಿತವಾಗಿ ಯೋಜನೆ ಮಾಡತಕ್ಕ ಪ್ರಮಾಣದಲ್ಲಿ ನಮ್ಮವರು ಕೆಲಸ ಮಾಡಬೇಕೆಂದು ಮಾನ್ಯ ಕೆ.ಎಚ್. ಪಾಟೀಲರು ಹೇಳಿದ್ದಾರೆ. ನಾವು ಇನ್ನೂ ಆ ಮಟ್ಟಕ್ಕೆ ಬಂದಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಅವರ ಮಾನಸಿಕ ಗುಣ ಮಟ್ಟಕ್ಕೆ ಬರಬೇಕೆಂದು ನನಗೂ ಆಸೆ ಇದೆ ಆದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಮಹಾರಾಷ್ಟ್ರದಿಂದ ೧೫೦ ಕ್ವಿಂಟಾಲ್‌ನಷ್ಟು ಹತ್ತಿ ಬೀಜ ಒಂದೆರಡು ವಾರದೊಳಗಾಗಿ ಬರತಕ್ಕ ವ್ಯವಸ್ಥೆ ಇದೆ. ಅದು ಬಂದತಕ್ಷಣ ಅತೀ ವೇಗದಿಂದ ಹತ್ತಿ ಬೀಜಗಳನ್ನು ವಿತರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಗುಜರಾತಿನಿಂದ ೨೧ ಕ್ವಿಂಟಾಲ್‌ನಷ್ಟು ಹತ್ತಿ ಬೀಜ ಬರತಕ್ಕ ನಿರೀಕ್ಷೆ ಇದೆ. ಅದು ಬಂದ ತಕ್ಷಣ ರೈತರಿಗೆ ಒದಗಿಸತಕ್ಕ ಪ್ರಯತ್ನ ಮಾಡುತ್ತೇವೆ. ಮಾನ್ಯ ಆರ್.ಎನ್. ನಾಯಕ್ ಅವರು ದೇಶಪಾಂಡೆಯವರು ರಾಜಕೀಯ ದುರ್ಬೀಜವನ್ನು ಬಿತ್ತುತ್ತಿದ್ದಾರೆ ಎಂದು ಹೇಳಿದ್ದಾರೆ.

ಶ್ರೀ ಆರ್.ಎನ್. ನಾಯಕ್.—ನಾನು ಬಿತ್ತುತ್ತಿದ್ದ್ದಾರೆ ಎಂದು ಹೇಳಲಿಲ್ಲ. ಸಂಗ್ರಹ ಮಾಡಿ ಸ್ಟಾಕ್ ಮಾಡಿದ್ದಾರೆ ಎಂದು ಹೇಳಿದೆ. ಏನು ಮಾಡುತ್ತಾರೋ ಅದನ್ನು ನೋಡೋಣ.

ಅಧ್ಯಕ್ಷರು.—ನಿಮಗೆ ರಾಜಕೀಯ ಬಿಟ್ಟರೆ ಇನ್ನೇನೂ ಮಾಡುವುದಕ್ಕೆ ಬರುವುದಿಲ್ಲವೆ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಬೀಜ ಎಲ್ಲದಕ್ಕೂ ಬೇಕು. ಎರಡು ವಿಧವಾದಂಥ ಬೆಳೆ ಇದೆ ಈ ದೇಶದಲ್ಲಿ. ಅಂಡಜ ಮತ್ತು ಪಿಂಡಜ ಎಂದು.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಬಿತ್ತನೆ ಮಾಡುವ ಬಗ್ಗೆ ಗೊತ್ತಿಲ್ಲದವರು ಬಿತ್ತನೆ ಬಗ್ಗೆ ಸರಿಯಾದ ರೀತಿಯಲ್ಲಿ ಮಾಹಿತಿಯನ್ನು ಕೊಡುತ್ತಿದ್ದಾರೆ. ಅದನ್ನು ಕೇಳುವುದಕ್ಕೆ ನೀವು ತಯಾರಿಲ್ಲವಲ್ಲ!

ಶ್ರೀ ಎ. ಲಕ್ಷ್ಮೀಸಾಗರ್.—ಅವರು ರಾಜಕೀಯ ದುರ್ಬೀಜ ಎಂದು ಹೇಳಿದರು. ಬೀಜ ಎಲ್ಲರಿಗೂ ಬೇಕಾಗುತ್ತದೆ. ಬೀಜ ಇಲ್ಲದೆ ಯಾರೂ ಬದುಕುವ ಹಾಗೆ ಇಲ್ಲ. ಬೀಜ ಉತ್ಪಾದನಾ ಕೇಂದ್ರಗಳು. ಅಂದರೆ ಬೀಜದ ಉಗಮ ಸ್ಥಾನ ಎರಡು. ಒಂದು ಅಂಡಜ ಇನ್ನೊಂದು ಪಿಂಡಜ. ಸಸಿಯಿಂದ ಬರತಕ್ಕಂಥದ್ದು. ಅದರಿಂದ ಉತ್ಪಾದನೆಯಾಗತಕ್ಕಂಥದ್ದು ಬೀಜ. ಅದನ್ನು ಮಂತ್ರದಿಂದ ಅಥವಾ ತಂತ್ರದಿಂದ ತಯಾರು ಮಾಡುವುದಕ್ಕಾಗುವುದಿಲ್ಲ. ನೈಸರ್ಗಿಕವಾಗಿ ಬೀಜೋತ್ಪಾದನೆಗೆ ಎಷ್ಟು ಸಮಯ ಬೇಕೋ ಅಷ್ಟು ಸಮಯವನ್ನು ಕೊಡುವಂತಹ ನೀತಿಯನ್ನು ಆಳವಡಿಸಿಕೊಂಡರೆ ಮಾತ್ರ ಸಾಧಾರಿಸಿದ ಬೀಜ ಸಿಕ್ಕತಕ್ಕಂಥದ್ದು. ಆದ್ದರಿಂದ ಇದರಲ್ಲಿ ವಿಳಂಬವಾಗುತ್ತದೆ. ಈಗ ಒಮ್ಮೆಗೆ ತೊಂದರೆ ಬಿದಿದೆ. ಅದನ್ನು ಬಹಳ ಬೇಗ ನಿವಾರಣೆ ಮಾಡುವುದಕ್ಕೆ ಸಮ್ಮಲ್ಲಿರುವಂಥ ಶಕ್ತಿ ಎಲ್ಲವನ್ನೂ ಉಪಯೋಗಿಸಿ ರೈತರಿಗೆ ಅತ್ಯಂತ ಕಡಿಮೆ ಪ್ರಮಾಣದ ಅವಧಿಯಲ್ಲಿಯೇ ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಸನ್ಮಾನ್ಯ ಸದಸ್ಯರಿಗೆ ವಿನಯಪೂರ್ವಕವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಚಾರವನ್ನು ಕೇಂದ್ರದ ಕೃಷಿ ಮಂತ್ರಿಗಳ ಗಮನಕ್ಕೆ ಸಂಸತ್ತಿನಲ್ಲಿ ತಂದಾಗ ಕೃಷಿ ಮಂತ್ರಿಗಳೇ ನಮ್ಮ ದೇಶದಲ್ಲಿ ಕೃಷಿಗೆ ಸಂಬಂಧಪಟ್ಟ ಬೀಜೋತ್ಪಾದನೆ ಬಹಳ ಕಡಿಮೆ ಇದೆ. ಹೊರದೇಶದಿಂದಾದರೂ ತರಿಸಿಕೊಂಡು, ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರಕ್ಕೆ ಬೇಗ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತು ಪತ್ರಿಕೆಗಳಲ್ಲಿ ಬಂದ ತಂಹ ವರದಿಯನ್ನು ಈ ಸಮಯದಲ್ಲಿ ನೆನಪಿಸಿಕೊಂಡು ಅದೇ ಮಾತನ್ನು ಮಾನ್ಯ ಸದಸ್ಯರ ಜ್ಞಾಪಕಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಎಲ್ಲಾ ತೀವ್ರರೀತಿಯ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದೇ ಮಾತನ್ನು ಸನ್ಮಾನ್ಯ ದೇಶಪಾಂಡೆಯವರು ಇದೇ ಸದನದಲ್ಲಿ ಹಿಂದೆ ೨ ಸಲ ಇದೆ. ಪ್ರಶ್ನೆ ಬಂದಾಗ ಹೇಳಿದ್ದಾರೆ. ಅದೇ ವಿಚಾರವನ್ನು ಮತ್ತೊಮ್ಮೆ ನಾನೂ ಪುನರುಚ್ಚಾರ ಮಾಡಿದ್ದೇನೆ. ರೈತರಿಗೆ ಬಂದಿರುವಂತಹ ಸಮಸ್ಯೆಯನ್ನು ಬಗೆಹರಿಸಿ ಅವರಿಗೆ ಬೇಕಾದಂತಹ ಬೀಜವನ್ನು ಬೇಗನೆ ಪೂರೈಕೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಮಲ್ಲಾರಿಗೌಡ ಎಸ್. ಪಾಟೀಲ್‌ರವರು ಸಂಬಂಧಪಟ್ಟ ಮಂತ್ರಿಗಳು ಊರಿನಲ್ಲಿ ಕುಳಿತುಕೊಳ್ಳುವುದು ಬೇಡ. ಅವರು ಪಟ್ಟಣದ ಜನವಾಗಿ ಉಳಿಯಬಾರದು. ಕೃಷಿ ಮಂತ್ರಿಯಾಗಿ ಗ್ರಾಮಾಂತರ ಪ್ರದೇಶದ ಜನರ ಪ್ರತಿನಿಧಿಯಾಗಿ ಸಕ್ರಿಯವಾಗಿ ತಮ್ಮ ಕಾರ್ಯಚರಣೆಯನ್ನು ಮಾಡಬೇಕು ಎನ್ನುವ ಮಾತನ್ನು ಅವರು ಹೇಳಿ, ಅದನ್ನು ಅವರು ತೋರಿಸಿ ಕೊಡಬೇಕೆಂಬುದಾಗಿ ಹೇಳಿದ್ದಾರೆ. ಹಾಗೂ ಮಾನ್ಯ ಮಂತ್ರಿಗಳು ಸ್ವತಃ ಸ್ಥಳ ಪರಿಶೀಲನೆ ಮಾಡಬೇಕು ಎಂದು ಹೇಳಿದ್ದಾರೆ. ಈ ಕೆಲಸವನ್ನು

ತಕ್ಷಣವೇ ಮಾಡಬೇಕೆಂದು ನಾನು ಅವರಲ್ಲಿ ಮನವಿ ಸಲ್ಲಿಸುತ್ತೇನೆ. ನಮ್ಮ ಪ್ರಯತ್ನದಿಂದಾಗಿ ಯಾವ ವಿಧವಾದ ತೊಂದರೆಯಾಗುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಶ್ರೀಮಾನ್ ನಾಯಕ್ ರವರು ಬಲವಾಗಿ ಈ ವಿಚಾರವನ್ನು ಪ್ರಸ್ತಾಪ ಮಾಡಿದಾರೆ. ಯಾವ ಪ್ರದೇಶಗಳಲ್ಲಿ ಇದನ್ನು ಬೆಚ್ಚು ಬೆಳೆಯುತ್ತಾರೋ ಅವರಿಗೆ ಕಡಿಮೆ ಅವಧಿಯಲ್ಲಿ ಬೀಜವನ್ನು ಸರಬರಾಜು ಮಾಡಬೇಕೆಂಬ ಮಾತನ್ನು ಹೇಳಿದ್ದಾರೆ. ಮತ್ತೆ ಇದು ಅರ್ಜೆಂಟಾಗಿರುವುದರಿಂದ ಎಲ್ಲಿಯಾದರೂ ಕಳಪೆ ಬೀಜವನ್ನು ತಂದು ಕೊಟ್ಟುಬಿಟ್ಟಿರಿ. ಕಳಪೆ ಬೀಜ ಬೇಕಾಗಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಅದನ ಬಗ್ಗೆ ಗಮನ ಹರಿಸಲಾಗುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ಕಾಟನ್ ಡೆವಲಪ್‌ಮೆಂಟ್ ಸ್ಕೀಮ್ ಅನ್ನೇ ಅಬಾಲಿಷ್ ಮಾಡಿದ್ದಾರೆ. ತಲೆ ತಲಾಂತರದಿಂದ ಬಂದಂತಹ ಸ್ಕೀಮನ್ನೇ ಅಬಾಲಿಷ್ ಮಾಡಿದ್ದಾರೆ. ಆದು ಇಲ್ಲದಿದ್ದರೆ ಮುಂದಿನ ವರ್ಷ ಬೀಜಕ್ಕೆರೈತರಿಗೆ ಸಿಕ್ಕುವುದಿಲ್ಲ. ಎಲ್ಲಾ ಕಡೆ ಭಿಕ್ಷೆ ಬೇಡಿ ತರುತ್ತೀರಾ ? ಆದ್ದರಿಂದ ಕಾಟನ್ ಡೆವಲಪ್‌ಮೆಂಟ್ ಸ್ಕೀಮನ್ನು ಮುಂದುವರಿಸುವಂತಹ ಕೆಲಸವನ್ನ ಮಾಡ ಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಆಗಲಿ ಸಾರ್.

ಶ್ರೀ ಆರ್. ಎನ್. ನಾಯಕ್.—ವಿಧಾನ ಸಭೆಯಲ್ಲಿ ಒತ್ತಾಯ ಮಾಡಿದರು ಎಂದೂ ಕೆಟ್ಟ ಬೀಜ ವನ್ನು ತಂದು ಕೊಟ್ಟು ಬಿಟ್ಟರಿ ? ಒಳ್ಳೆಯ ಬೀಜವನ್ನು ಸರಬರಾಜು ಮಾಡುವುದು ಬಹಳ ಮುಖ್ಯ ವಾದುದು. ಮೊನ್ನೆ ಕೂಡ ಬೇಗ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದರು. ಕನಿಷ್ಟ ೧೦ ದಿವಸ ಗಳಿಗಿಂತ ಮೊದಲೇ ಬೀಜ ಸರಬರಾಜು ಆಗಬೇಕಾಗಿತ್ತು. ಆದು ಆಗಿಲ್ಲ. ಇವತ್ತೇ ನಿಮ್ಮ ಅಧಿಕಾರಿ ಗಳಿಗೆ ತಿಳಿಸಿ ಕೂಡಲೇ ಆ ಬಗ್ಗೆ ಕ್ರಮ ಕೈಗೊಳ್ಳುವಂತೆ ಆದೇಶವನ್ನು ನೀಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಆಯಿತಂ.

ನಿಯಮ ೩೩ಳಿರ ಮೇರೆಗೆ

೪) ಗ್ರಾಮೀಣ ಪ್ರದೇಶದಲ್ಲಿ ಕೈಗಾರಿಕೋದ್ಯಮಗಳಿಗೆ ಸರ್ಕಾರ ಪ್ರೋತ್ಸಾಹ ನೀಡಿ ವಿದ್ಯುತ್ ಸರಬರಾಜು ಮಾಡುವುದರ ಬಗ್ಗೆ.

ಶ್ರೀಮತಿ ಸುಮಾ ವಸಂತ.—ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಪ್ರದೇಶದಲ್ಲಿ ಕೈಗಾರಿಕೋದ್ಯಮಿ ಗಳಿಗೆ ಸರ್ಕಾರ ಪ್ರೋತ್ಸಾಹ ನೀಡಬೇಕು. ಆದರ ಬದಲು ''ವಿದ್ಯುತ್ ಕಡಿತ''ದ ಧೋರಣೆಯಿಂದಾಗಿ ಚಿಕ್ಕ ಕೈಗಾರಿಕೆಗಳ ಕತ್ತು ಹಿಸುಕುವ ಪರಿಸ್ಥಿತಿ ಬಂದಿದೆ. ಕೊಡಗು ಜಿಲ್ಲೆಯಲ್ಲಿ ಬೆಳಿಗ್ಗೆ ೮ ಗಂಟೆಯಿಂದ ಅಪರಾಹ್ನ ೪ ಗಂಟೆ ತನಕ ವಿದ್ಯುತ್ ಕಡಿತ. ರಾಜ್ಯದಲ್ಲಿ ಬೇರೆಲ್ಲೂ ಇಲ್ಲದ ನೀತಿ ಕೊಡಗಿನ ಹಳ್ಳಿಗಳಿಗೇಕೆ ? ಆದೂ ಸತತವಾಗಿ ೮ ಗಂಟೆ ಕಡಿತವೇಕೆ ? ಬೆಳಿಗ್ಗೆ ೪ ಗಂಟೆ, ಸಂಜೆ ೪ ಗಂಟೆ ಬೇರೆ ಬೇರೆ ಅವಧಿಯಲ್ಲಿ ಕಡಿತ ಮಾಡಿದರಾಗದೇ ? ರೈತರು, ಚಿಕ್ಕ ಉದ್ದಿಮೆದಾರರು ಎಲ್ಲರಿಗೂ ಈ ಸಂಕಟಕರವಾದ ನೀತಿ, ಕಂಟಕಪ್ರಾಯವಾಗಿದೆ. ಈ ಜಿಲ್ಲೆಯ ಜನ ಹಗಲು ಕೆಲಸವೇ ಮಾಡಬಾರದೆಂದು ಸರ್ಕಾರದ ಧೋರಣೆ ಇದೆಯೇ? ಆದೂ ಅಲ್ಲದೆ, ಗುಡ್ಡಗಾಡು ಪ್ರದೇಶವಾದ ಕೊಡಗಿನಲ್ಲಿ ಗುಡುಗು ಮಿಂಚು ಮಳೆ ಮರ ಬೀಳುವುದರಿಂದಾಗಿ ಒಮ್ಮೊಮ್ಮೆ ಎಷ್ಟೋ ಕಾಲ ವಿದ್ಯುತ್ ಕಡಿತವಾಗುತ್ತದೆ, ಈ ಪ್ರಕೃತಿಯ ಪ್ರಕೋಪದ ಜೊತೆಗೆ ಪ್ರಕೃತ ವಿದ್ಯುತ್ ಮಂಡಳಿಯ ಕಡಿತದ ಶಾಪವೂ ಸೇರಿ, ರೈತರು ಚಿಕ್ಕ ಉದ್ದಿಮೆದಾರರು ಶಾಪಕ್ಕೀಡಾದವರಂತಾಗಿದ್ದಾರೆ. ಈ ಪರಿತಾಪವನ್ನು ಪರಿಶೀಲಿಸಿ, ಕೊಡಗಿನ ಬರೀ 'ಪಾಪ'ದ ಜನರ ಮೇಲೆ ಅನುಕಂಪ ತೋರಿಸಿ, ಅನುಕೂಲಕರ ವ್ಯವಸ್ಥೆ ಮಾಡಿಸಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ೧೯೮೭–೮೮ನೇ ಸಾಲಿನಲ್ಲಿನ ಆನಿರ್ಬಂಧಿತ ಬೇಡಿಕೆ ೧೬,೯೮೦ ದಶಲಕ್ಷ ಯೂನಿಟ್‌ಗಳು. ಆದರೆ ಈ ಸಾಲಿನಲ್ಲಿ ಮುಂಗಾರು ಹೆಚ್ಚು ಕಡಿಮೆ ಪೂರ್ಣ ವಿಫಲವಾದ ಕಾರಣ ಆಂತರಿಕ ವಿದ್ಯುತ್ ಉತ್ಪಾದನೆಯಲ್ಲಿ ಗಮನಾರ್ಹ ಇಳಿಮುಖವಾಗಿ ೧೯೮೭–೮೮ನೇ ಸಾಲಿನಲ್ಲಿ ರಾಜ್ಯದಲ್ಲಿ ಎಲ್ಲಾ ಮೂಲಗಳಿಂದ ದೊರೆತ ವಿದ್ಯುತ್ ೧೦,೬೪೩ ದಶಲಕ್ಷ ಯೂನಿಟ್‌ಗಳು. ಹೀಗಾಗಿ ಕೊರತೆ ೬,೨೫೭ ದಶಲಕ್ಷ ಯೂನಿಟ್‌ಗಳಾದವು. ಈ ಕೊರತೆ ತುಂಬಲು ನೀರಾವರಿ ಪಂಪ್ ಸೆಟ್ಟು ಮತ್ತು ವಿದ್ಯುತ್ ಚಿತಾಗಾರಗಳನ್ನು ಉಳಿದು, ಉಳಿದೆಲ್ಲಾ ಗ್ರಾಹಕರ ಮೇಲೆ ಶೇಕಡ ೧೦ ರಿಂದ ೮೦ರ ವರೆಗೆ ಕಡಿತವನ್ನು ವಿಧಿಸಲಾಗಿದೆ.

ನೀರಾವರಿ ಪಂಪ್‌ಸೆಟ್ಟಿನ ಗ್ರಾಹಕರ ಬಳಕೆಯ ಮೇಲೆ ನಿರ್ಬಂಧವಿಲ್ಲ. ವಿದ್ಯುತ್ ಸಂರಕ್ಷಣೆಗೆ ಈ ವರ್ಗದ ಗ್ರಾಹಕರಿಂದಲೂ ಸಹಕಾರ ಅಗತ್ಯವಿದ್ದ ಪಂಪ್‌ಸೆಟ್ಟುಗಳ ಲೋಡ್ ಅಧಿಕವಾಗಿರುವ ಗ್ರಾಮೀಣ ಫೀಡರ್‌ಗಳಲ್ಲಿ ಹಗಲಿನಲ್ಲಿ ೮ ಗಂಟೆಗಳ ಕಾಲ ವಿದ್ಯುತ್ ಸರಬರಾಜಿಗೆ ತರಲಾಯಿತು